## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳಿಗೆ ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕ ಮತ್ತು ಭದ್ರತಾ ಠೇವಣಿ ಮೊತ್ತ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:

(1) ಸರ್ಕಾರದ ಆದೇಶ ಸಂಖ್ಯೆ ಇಡಿ.709 ಪಿಜಿಸಿ 2017 ದಿನಾಂಕ.07.02.2018

(2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ:ಎಂಸಿ.10 ಹಿಂ&ಅರೇ:04/296713/ಸಿಪಿಐಬಿಎಮ್-2019 ದಿನಾಂಕ.24.04.2019

ಪ್ರ ಸ್ತಾ ವ ನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ರಾಜ್ಯದ ಎಲ್ಲಾ ಖಾಸಗೀ ಅನುದಾನಿತ ಹಾಗೂ ಅನುದಾನ ರಹಿತ ಸಾಮಾನ್ಯ ಶಾಲಾ/ಕಾಲೇಜುಗಳಿಗೆ 2018-19 ನೇ ಸಾಲಿನಿಂದ ಜಾರಿಗೆ ಬರುವಂತೆ ಮಾನ್ಯತೆ ನವೀಕರಣ ಪ್ರಕ್ರಿಯೆಗೆ ಶುಲ್ಕ ನಿಗದಿಪಡಿಸಿ ಭದ್ರತಾ ಠೇವಣಿ ಮೊತ್ತಗಳನ್ನು ಸಹ ಪರಿಷ್ಕರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಖಾಸಗೀ ಅನುದಾನಿತ ಹಾಗೂ ಅನುದಾನ ರಹಿತ ಸಾಮಾನ್ಯ ಶಾಲಾ/ಕಾಲೇಜುಗಳಿಗೆ ಶುಲ್ಕಗಳನ್ನು ನಿಗದಿಪಡಿಸಿರುವ ಮಾದರಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ನಿಯಂತ್ರಣದಲ್ಲಿ ಬರುವ ರಾಜ್ಯದ ಎಲ್ಲಾ ಖಾಸಗೀ ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳಿಗೂ ಸಹ ಹೊಸದಾಗಿ ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕವನ್ನು ನಿಗದಿಪಡಿಸುವುದು ಮತ್ತು ಭದ್ರತಾ ಠೇವಣಿ ಮೊತ್ತಗಳನ್ನು ಸಹ ಪರಿಷ್ಕರಿಸುವುದು ಅವಶ್ಯಕವೆಂದು ಪರಿಗಣಿಸಿ ಕೆಳಕಂಡಂತೆ ಸರ್ಕಾರದಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ

| ಕ್ರ ಸಂ | ಅರೇಬಿಕ್ ಶಾಲಾ ಕಾಲೇಜಿನ ಹಂತದ ವಿವರ | ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕ |
|---|---|---|
| 01 | ತಹತಾನಿಯ ಮತ್ತು ಉಸ್ತಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Primary education Stage) | ರೂ.5000/- (ಐದು ಸಾವಿರ ರೂಪಾಯಿಗಳು ಮಾತ್ರ) |
| 02 | ತಹತಾನಿಯ ಉಸ್ತಾನಿಯ ಮತ್ತು ಪೌಕಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Secondary education Stage) | ರೂ.10000/-(ಹತ್ತು ಸಾವಿರ ರೂಪಾಯಿಗಳು ಮಾತ್ರ) |
| 03 | ತಹತಾನಿಯ ಉಸ್ತಾನಿಯ ಪೌಕಾನಿಯ, ಮತ್ತು ಅಫ಼ಜಲ್ ಉಲ್ಮಾ ಮದ್ಯಮ ಮತ್ತು ಅಫ಼ಜಲ್ ಉಲ್ಮಾ ಉತ್ತಮ ಹಂತದ ವರೆಗಿನ ತರಗತಿಗಳನ್ನು ಹೊಂದಿರುವ ಅರೇಬಿಕ್ ಕಾಲೇಜುಗಳು (College education Stage) | ರೂ.20000/- (ಇಪ್ಪತ್ತು ಐದು ಸಾವಿರ ರೂಪಾಯಿಗಳು ಮಾತ್ರ) |

ಈಗಾಗಲೇ ತೆರೆಯಲು ಅನುಮತಿ ಪಡೆದಿರುವ ಶಾಲಾ/ಕಾಲೇಜುಗಳನ್ನು ಹೊರತುಪಡಿಸಿ ಹೊಸದಾಗಿ ತೆರೆಯುವ ಅಥವಾ ಮೇಲ್ದರ್ಜೆಗೇರಿಸುವ ಅರೇಬಿಕ್ ಶಾಲಾ/ಕಾಲೇಜುಗಳು ಠೇವಣಿ ಇಡಬೇಕಾದ ಭದ್ರತಾ ಠೇವಣಿ ಮೊತ್ತಗಳನ್ನು ಕೆಳಕಂಡಂತೆ ಪರಿಷ್ಕರಿಸಲು ಕೋರಲಾಗಿರುತ್ತದೆ.

---2

| ಕ್ರ ಸಂ | ಅರೇಬಿಕ್ ಶಾಲಾ ಕಾಲೇಜಿನ ಹಂತದ ವಿವರ | ಭದ್ರತಾ ಠೇವಣಿ ಮೊತ್ತ. |
|---|---|---|
| 01 | ತಹತಾನಿಯ ಮತ್ತು ಉಸ್ತಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Primary education Stage) | ರೂ.2,00,000/- (ಎರಡು ಲಕ್ಷ ರೂಪಾಯಿಗಳು ಮಾತ್ರ) |
| 02 | ತಹತಾನಿಯ ಉಸ್ತಾನಿಯ ಮತ್ತು ಫೌಕಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Secondary education Stage) | ರೂ.3,00,000/- (ಮೂರು ಲಕ್ಷ ರೂಪಾಯಿಗಳು ಮಾತ್ರ) |
| 03 | ತಹತಾನಿಯ ಉಸ್ತಾನಿಯ ಫೌಕಾನಿಯ, ಮತ್ತು ಅಫಜಲ್ ಉಲ್ಮಾ ಮದ್ಯಮ ಮತ್ತು ಅಫಜಲ್ ಉಲ್ಮಾ ಉತ್ತಮ ಹಂತದ ವರೆಗಿನ ತರಗತಿಗಳನ್ನು ಹೊಂದಿರುವ ಅರೇಬಿಕ್ ಕಾಲೇಜುಗಳು (College education Stage) | ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) |

ಖಾಸಗೀ ಅನುದಾನಿತ ಹಾಗೂ ಅನುದಾನ ರಹಿತ ಸಾಮಾನ್ಯ ಶಾಲಾ/ಕಾಲೇಜುಗಳಿಗೆ ಅನ್ವಯಿಸುವ ನಿಯಮಗಳು ಖಾಸಗೀ ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳಿಗೂ ಸಹ ಅನ್ವಯಿಸಬೇಕೆಂಬುದನ್ನು ಪರಿಗಣಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಇಪಿ 04 ಎಸ್‌ಎಮ್‌ಸಿ 2019, ಬೆಂಗಳೂರು ದಿನಾಂಕ 21.04.2020</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಅರೇಬಿಕ್ ಅನುದಾನ ಸಂಹಿತೆ ಅನ್ವಯ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳ ಹಿಂದೆ ಇದ್ದ ಭದ್ರತಾ ಠೇವಣಿ ಮೊತ್ತಗಳನ್ನು ಪರಿಷ್ಕರಿಸಿ ಮತ್ತು ಹೊಸದಾಗಿ ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕಗಳನ್ನು ಮುಂದಿನ ಆದೇಶದವರೆಗೆ ಸರ್ಕಾರವು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ :-

2020-21ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿನ ಎಲ್ಲಾ ಖಾಸಗೀ ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳು ಮಾನ್ಯತೆ ನವೀಕರಣ ಪಡೆಯಲು ಪಾವತಿಸಬೇಕಾದ ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕಗಳ ವಿವರ:-

| ಕ್ರ ಸಂ | ಅರೇಬಿಕ್ ಶಾಲಾ ಕಾಲೇಜಿನ ಹಂತದ ವಿವರ | ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕ |
|---|---|---|
| 01 | ತಹತಾನಿಯ ಮತ್ತು ಉಸ್ತಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Primary education Stage) | ರೂ.5000/- |
| 02 | ತಹತಾನಿಯ ಉಸ್ತಾನಿಯ ಮತ್ತು ಫೌಕಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Secondary education Stage) | ರೂ.10000/- |
| 03 | ತಹತಾನಿಯ ಉಸ್ತಾನಿಯ ಫೌಕಾನಿಯ, ಮತ್ತು ಅಫಜಲ್ ಉಲ್ಮಾ ಮದ್ಯಮ ಮತ್ತು ಅಫಜಲ್ ಉಲ್ಮಾ ಉತ್ತಮ ಹಂತದ ವರೆಗಿನ ತರಗತಿಗಳನ್ನು ಹೊಂದಿರುವ ಅರೇಬಿಕ್ ಕಾಲೇಜುಗಳು (College education Stage) | ರೂ.20000/- |

-3

ಈಗಾಗಲೇ ಅನುಮತಿ ಪಡೆದು ಚಾಲನೆಯಲ್ಲಿರುವ ಅರೇಬಿಕ್ ಶಾಲಾ/ಕಾಲೇಜುಗಳನ್ನು ಹೊರತುಪಡಿಸಿ 2020-21ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಎಲ್ಲಾ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳು ಠೇವಣಿ ಇಡಬೇಕಾದ ಪರಿಷ್ಕೃತ ಭದ್ರತಾ ಠೇವಣಿ ಮೊತ್ತಗಳ ವಿವರ :-

| ಕ್ರ ಸಂ | ಅರೇಬಿಕ್ ಶಾಲಾ ಕಾಲೇಜಿನ ಹಂತದ ವಿವರ | ಭದ್ರತಾ ಠೇವಣಿ ಮೊತ್ತ. |
|---|---|---|
| 01 | ತಹತಾನಿಯ ಮತ್ತು ಉಸ್ತಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Primary education Stage) | ರೂ.2,00,000/- (ಎರಡು ಲಕ್ಷ ರೂಪಾಯಿಗಳು ಮಾತ್ರ) |
| 02 | ತಹತಾನಿಯ ಉಸ್ತಾನಿಯ ಮತ್ತು ಫೌಕಾನಿಯ ತರಗತಿಗಳನ್ನು ಹೊಂದಿರುವ ಅರೇಬಿಕ್ ಶಾಲೆಗಳು (Secondary education Stage) | ರೂ.3,00,000/- (ಮೂರು ಲಕ್ಷ ರೂಪಾಯಿಗಳು ಮಾತ್ರ) |
| 03 | ತಹತಾನಿಯ ಉಸ್ತಾನಿಯ ಫೌಕಾನಿಯ, ಮತ್ತು ಅಫಜಲ್ ಉಲ್ಮಾ ಮದ್ಯಮ ಮತ್ತು ಅಫಜಲ್ ಉಲ್ಮಾ ಉತ್ತಮ ಹಂತದ ವರೆಗಿನ ತರಗತಿಗಳನ್ನು ಹೊಂದಿರುವ ಅರೇಬಿಕ್ ಕಾಲೇಜುಗಳು (College education Stage) | ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) |

ಮೇಲ್ಕಂಡಂತೆ ಮಾನ್ಯತೆ ನವೀಕರಣ ಪ್ರಕ್ರಿಯೆ ಶುಲ್ಕಗಳನ್ನು ಮತ್ತು ಭದ್ರತಾ ಠೇವಣಿ ಮೊತ್ತಗಳನ್ನು 2020-21 ನೇ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲಾಗಿದ್ದು ಪರಿಷ್ಕೃತ ಭದ್ರತಾ ಠೇವಣಿ ದರಗಳು ಈಗಾಗಲೇ ಅನುಮತಿ ಪಡೆದು ಚಾಲನೆಯಲ್ಲಿರುವ ಶಾಲೆಗಳಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎರ ಧನಂಜಯ) 21/4/20
ಸರ್ಕಾರದ ಆಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಆಡಳಿತ)

ಇವರಿಗೆ,

1. ಮಹಾಲೇಖಪಾಲರು (ಇ & ಎಸ್ ಎ) ಹೊಸ ಕಟ್ಟಡ ಆಡಿಟ್ ಭವನ, ಅಂಚೆ ಪೆಟ್ಟಿಗೆ -5398 ಕರ್ನಾಟಕ, ಬೆಂಗಳೂರು-01
2. ಮಹಾಲೇಖಪಾಲರು ಪಾರ್ಕ್ ಹೌಸ್ ರಸ್ತೆ ಕರ್ನಾಟಕ, ಬೆಂಗಳೂರು-01
3. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು-01
4. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಬೆಂಗಳೂರು-01
5. ರಾಜ್ಯದ ಎಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆಯ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಮೂಲಕ)
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು: